## ನಿಮ್ಮೊಡನೆ

# ಗಣಕಯಂತ್ರದಲ್ಲಿ ಕನ್ನಡ..

ಬೆಂಗಳೂರು ಈಗ ಕರ್ನಾಟಕದ ರಾಜಧಾನಿಯಾಗಷ್ಟೇ ಉಳಿದಿಲ್ಲ. ಮಾಹಿತಿ ತಂತ್ರಜ್ಞಾನದಲ್ಲಿ ಅದು ಅಮೆರಿಕದ ಸಿಲಿಕಾನ್ ವ್ಯಾಲಿಗೆ ಪೈಪೋಟಿ ನೀಡುವಷ್ಟು ಸಮರ್ಥವಾಗಿದೆ. ವಿಪರ್ಯಾಸದ ಸಂಗತಿ ಎಂದರೆ ಕಂಪ್ಯೂಟರ್‌ನಲ್ಲಿ ಇಂಗ್ಲಿಷ್‌ನಷ್ಟು ಸಲೀಸಾಗಿ ಕನ್ನಡವನ್ನು ಬಳಸಲು ನಮಗೆ ಸಾಧ್ಯವಾಗಿಲ್ಲ. ಇದೇ ದೊಡ್ಡ ಕೊರತೆ. ಇದಕ್ಕೆ ಪರಿಹಾರ ಇಲ್ಲವೆಂದಲ್ಲ. ಆದರೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಚುರುಕಾಗಿ ನಡೆಯುತ್ತಿಲ್ಲ.

ಮತ್ತೊಂದು ರಾಜ್ಯೋತ್ಸವ ಬಂದಿದೆ. ನವೆಂಬರ್ ತಿಂಗಳಿಡೀ ಕನ್ನಡದ ಅಭಿವೃದ್ಧಿ ಕುರಿತ ಮಾತುಗಳೇ ಕೇಳಿ ಬರುತ್ತವೆ. ಕನ್ನಡ ಮತ್ತು ಕನ್ನಡಿಗರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ಪ್ರಯತ್ನಗಳು ಹೆಚ್ಚಾಗಿ ನಡೆಯುವುದು ರಾಜ್ಯೋತ್ಸವದ ಸಂದರ್ಭದಲ್ಲಿಯೇ. 'ಕನ್ನಡಕ್ಕೆ ಮೊದಲ ಸ್ಥಾನ ಸಿಗಬೇಕು. ಸರ್ಕಾರಿ ಮತ್ತು ಖಾಸಗಿ ವಲಯಗಳ ಆಡಳಿತದಲ್ಲಿ ಕನ್ನಡ ಹೆಚ್ಚು ಬಳಕೆಯಾಗಬೇಕು. ರಾಜ್ಯದಲ್ಲಿರುವ ಕನ್ನಡೇತರರು ಕನ್ನಡ ಕಲಿತು ಅದರಲ್ಲೇ ವ್ಯವಹರಿಸಬೇಕು..' ಇತ್ಯಾದಿ ಒತ್ತಾಯಗಳು ಈ ಸಂದರ್ಭದಲ್ಲಿ ಹೆಚ್ಚಾಗಿ ಕೇಳಿ ಬರುತ್ತವೆ. ಇದು ವಿಶೇಷವೇನಲ್ಲ. ಆದರೆ ಮಾತು, ಘೋಷಣೆಗಳಲ್ಲಿ ವ್ಯಕ್ತವಾಗುವ ಕನ್ನಡ ಕಾಳಜಿ ಕಾರ್ಯರೂಪಕ್ಕೆ ಬರಬಹುದೇ ಎಂದು ಯಾರಾದರೂ ಪ್ರಶ್ನಿಸಿದರೆ ಉತ್ತರ ಹೇಳುವುದು ಕಷ್ಟ.

ಕನ್ನಡದ ಅಭಿವೃದ್ಧಿಗೆ ಏನು ಮಾಡಬೇಕು ಎಂಬ ವಿಷಯದಲ್ಲಿ ನಮಗೆ ಖಚಿತವಾದ ಅಭಿಪ್ರಾಯಗಳಿವೆ. ಕನ್ನಡ ಪರ ಕಾಳಜಿಗೂ ಕೊರತೆ ಇಲ್ಲ. ಆದರೂ ಇವೆಲ್ಲ ಒಂದು ಕಾಲಮಿತಿಯಲ್ಲಿ ಕಾರ್ಯರೂಪಕ್ಕೆ ಬರುವ ಸಾಧ್ಯತೆ ಕಡಿಮೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಬಳಕೆ ಕುರಿತಂತೆ ನಮ್ಮ ನಿರೀಕ್ಷೆಗಳು ಬೆಟ್ಟದಷ್ಟಿವೆ. ಆದರೆ ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಉತ್ತೇಜನಕಾರಿಯಾಗಿಲ್ಲ. ಕಂಪ್ಯೂಟರ್‌ಗಳಲ್ಲಿ ಕನ್ನಡವನ್ನು ಬಳಸಲು ಅನೇಕ ಅಡಚಣೆಗಳಿವೆ. ಮಾಹಿತಿ ತಂತ್ರಜ್ಞಾನದ ಹೊಸ ಆವಿಷ್ಕಾರಗಳನ್ನು ಬಳಸಿಕೊಳ್ಳುವ ಧಾವಂತ ಇಡೀ ವಿಶ್ವದಲ್ಲಿ ಕಂಡು ಬರುತ್ತದೆ. ಆದರೆ ನಾವು ಹಿಂದುಳಿದಿದ್ದೇವೆ. ಹಿಂದಿ, ತಮಿಳು ಮತ್ತಿತರ ಭಾರತೀಯ ಭಾಷೆಗಳು ಈ ವಿಷಯದಲ್ಲಿ ನಮಗಿಂತ ಮುಂದಿವೆ.

ಬೆಂಗಳೂರು ಈಗ ಕರ್ನಾಟಕದ ರಾಜಧಾನಿಯಾಗಷ್ಟೇ ಉಳಿದಿಲ್ಲ. ಮಾಹಿತಿ ತಂತ್ರಜ್ಞಾನದಲ್ಲಿ ಅದು ಅಮೆರಿಕದ ಸಿಲಿಕಾನ್ ವ್ಯಾಲಿಗೆ ಪೈಪೋಟಿ ನೀಡುವಷ್ಟು ಸಮರ್ಥವಾಗಿದೆ. ವಿಪರ್ಯಾಸದ ಸಂಗತಿ ಎಂದರೆ ಕಂಪ್ಯೂಟರ್‌ನಲ್ಲಿ ಇಂಗ್ಲಿಷ್‌ನಷ್ಟು ಸಲೀಸಾಗಿ ಕನ್ನಡವನ್ನು ಬಳಸಲು ನಮಗೆ ಸಾಧ್ಯವಾಗಿಲ್ಲ. ಇದೇ ದೊಡ್ಡ ಕೊರತೆ. ಇದಕ್ಕೆ ಪರಿಹಾರ ಇಲ್ಲವೆಂದಲ್ಲ. ಆದರೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಚುರುಕಾಗಿ ನಡೆಯುತ್ತಿಲ್ಲ. ಕಂಪ್ಯೂಟರ್‌ನಲ್ಲಿ ಕನ್ನಡವನ್ನು ಬಳಸಲು ಸಾಧ್ಯವಾಗಿರುವುದೇ ದೊಡ್ಡ ಸಾಧನೆ ಎಂದು ಅನೇಕರು ಭಾವಿಸಿದ್ದಾರೆ. ಈ ಬಳಕೆಯೂ ಗ್ರಾಹಕಸ್ನೇಹಿಯಾಗಿಲ್ಲ. ಕಂಪ್ಯೂಟರ್‌ಗಳಲ್ಲಿ ಕನ್ನಡ ಬಳಸುವವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ತಂತ್ರಾಂಶಗಳಲ್ಲಿ ಏಕರೂಪತೆ ಇಲ್ಲ. ಅದರಿಂದಾಗಿಯೇ ಗೊಂದಲ. ಒಂದು ತಂತ್ರಾಂಶ ಬಳಸಿ ಕಂಪ್ಯೂಟರ್‌ನಲ್ಲಿ ತಯಾರಿಸಿದ ಕಡತ(ಫೈಲ್)ವನ್ನು ಬೇರೊಂದು ತಂತ್ರಾಂಶ ಇರುವ ಕಂಪ್ಯೂಟರ್‌ನಲ್ಲೂ ಸುಲಭವಾಗಿ ಓದಲು ಸಾಧ್ಯವಾಗುತ್ತಿಲ್ಲ. ತಂತ್ರಾಂಶಗಳ ಬಳಕೆಯಲ್ಲಿನ ಮಿತಿ ಇದು. ಇದನ್ನು ನಿವಾರಿಸಿಕೊಳ್ಳುವುದಕ್ಕೆ ಹೆಚ್ಚಿನ ಗಮನ ಕೊಡಬೇಕಿದೆ. ಕನ್ನಡ ತಂತ್ರಾಂಶ ಸಾರ್ವಜನಿಕ ವಲಯದಲ್ಲಿ ಹೆಚ್ಚಾಗಿ ಬಳಕೆ ಆಗುತ್ತಿಲ್ಲ. ಅಂತರ್ಜಾಲದಲ್ಲಿ ಇಂಗ್ಲಿಷ್‌ನಷ್ಟು ಸಲೀಸಾಗಿ ಕನ್ನಡ ಬಳಕೆ ಆಗುವಂತಿರಬೇಕು. ಅಂತರ್ಜಾಲದಲ್ಲಿ ಕನ್ನಡ ಬಳಸಬೇಕಾದರೆ ಬರವಣಿಗೆ ಯೂನಿಕೋಡ್‌ನಲ್ಲಿ ಇರಬೇಕು. ಈಗ ಬಳಕೆಯಾಗುತ್ತಿರುವ ತಂತ್ರಾಂಶಗಳು ಯೂನಿಕೋಡ್ ಬರವಣಿಗೆಗೆ ನೆರವಾಗುವುದಿಲ್ಲ. ಕಂಪ್ಯೂಟರ್‌ಗಳಲ್ಲಿ ಕನ್ನಡ ಬಳಸುವವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ಅಂತರ್ಜಾಲ ತಾಣವೊಂದರ ಅಗತ್ಯವಿದೆ.

ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಮನಸ್ಸು ಮಾಡಬೇಕು. ತಜ್ಞರ ಸಮಿತಿಯೊಂದನ್ನು ರಚಿಸಿ ಕಾಲಮಿತಿಯಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಕನ್ನಡ ಭಾಷೆಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸಾಕಷ್ಟು ಹಣ ವೆಚ್ಚ ಮಾಡುತ್ತಿದೆ. ಆದರೆ ಕಂಪ್ಯೂಟರ್‌ಗಳಲ್ಲಿ ಕನ್ನಡ ಬಳಕೆಗೆ ಇರುವ ಅಡಚಣೆಗಳನ್ನು ನಿವಾರಿಸುವತ್ತಲೂ ಸರ್ಕಾರ ಹೆಚ್ಚಿನ ಆಸಕ್ತಿ ತೋರಬೇಕು.

ಕನ್ನಡದಲ್ಲಿ ವಿಕಿಪಿಡಿಯಾ ಮಾದರಿಯ ವೆಬ್ ಪೋರ್ಟಲ್ ಒಂದನ್ನು ರೂಪಿಸುವ ಪ್ರಯತ್ನ ನಡೆಯುತ್ತಿದೆ. ಉನ್ನತ ತಂತ್ರಜ್ಞಾನ ಬಳಸಿ ವೆಬ್ ಪೋರ್ಟಲ್ ಸಿದ್ಧಪಡಿಸುವುದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಕೆಲವು ತಿಂಗಳ ಹಿಂದೆ ಹೇಳಿದ್ದರು. ಈ ನಿಟ್ಟಿನಲ್ಲಿ ಎಷ್ಟು ಪ್ರಗತಿ ಆಗಿದೆ ಎನ್ನುವುದು ಗೊತ್ತಾಗಿಲ್ಲ. ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞರಿಗೆ ಕೊರತೆ ಇಲ್ಲ. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ದುಡಿಯುವ ಕನ್ನಡ ಭಾಷಿಕ ತಜ್ಞರು ಮನಸ್ಸು ಮಾಡಿದರೆ ಇದು ದೊಡ್ಡ ವಿಷಯವೇನೂ ಅಲ್ಲ. ಅರೆಬರೆ ಆಂಗ್ಲ ಇ-ಮೇಲ್‌ಗಳ ಬದಲಿಗೆ, ಎಲ್ಲ ಕಡೆಯಿಂದಲೂ, ಎಲ್ಲರೂ ಕನ್ನಡ ಮಿಂಚೋಲೆ ಕಳಿಸುವುದು ಸುಲಭವಾದರೆ, ಕನ್ನಡದ ಪ್ರಸಾರಕ್ಕೆ ಇನ್ನಷ್ಟು ಬಲ ಬರಲಿದೆ.

■ ಪ್ರೇಮಕುಮಾರ್ ಹರಿಯಬ್ಬೆ



ಈಶ್ವರ ಬಡಿಗೇರ